REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 । ಸಂಚಿಕೆ : 21 । 26 ಆಗಸ್ಟ್ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ದಿನಾಂಕ : 20.08.2026ರಂದು ಉಡುಪಿಯಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು /ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು




**ಉಡುಪಿ:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ದಿನಾಂಕ : 20.08.2026 ರಂದು ಉಡುಪಿಯ ಎಲ್.ಐ.ಸಿ. ಎಂಪ್ಲಾಯಿಸ್ ಕೋ-ಆಪರೇಟಿವ್ ಬ್ಯಾಂಕಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರು ಉದ್ಘಾಟಿಸಿ ಮಾತನಾಡಿ, ರಾಜ್ಯದ ಎಲ್ಲ ಪಟ್ಟಣ ಸಹಕಾರ ಬ್ಯಾಂಕ್‌ಗಳಿಗೆ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರ ಅಧ್ಯಕ್ಷತೆಯಲ್ಲಿ ಕೈಗೊಳ್ಳುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಸದಸ್ಯರುಗಳಿಗೆ ಮತ್ತು ಸಿಬ್ಬಂದಿಗಳಿಗೆ ಆಯೋಜಿಸುವ ಉಪಯುಕ್ತ ಶಿಬಿರಗಳ ಬಗ್ಗೆ ತಿಳಿಸಿದರು.

ಪಟ್ಟಣ ಸಹಕಾರಿ ಬ್ಯಾಂಕ್‌ಗಳು ಹೊಸ ತಂತ್ರಜ್ಞಾನ ಅಳವಡಿಸಿಕೊಂಡು, ಆರ್‌ಬಿಐ ನಿರ್ದೇಶನಗಳಿಗೆ ಅನುಗುಣ ಉತ್ತಮ ಆಡಳಿತ ನೀಡಬೇಕು. ಬ್ಯಾಂಕ್‌ಗಳ ನಿರ್ದೇಶಕರು ಸದಸ್ಯರ ಪ್ರತಿನಿಧಿಗಳಾಗಿ ಹಾಗೂ ಠೇವಣಿದಾರರ ರಕ್ಷಕರಾಗಿ ಕಾರ್ಯನಿರ್ವಹಿಸಬೇಕು. ಬ್ಯಾಂಕುಗಳ ಭವಿಷ್ಯ ರೂಪಿಸುವಲ್ಲಿ ಪಾರದರ್ಶಕತೆ, ಹೊಣೆಗಾರಿಕೆಯಿಂದ ನಡೆದುಕೊಳ್ಳುವುದು ಅಗತ್ಯ ಎಂದರು. ಈ ವಿಚಾರ ಸಂಕಿರಣದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಬನಶಂಕರಿ ಹೆಚ್.ಆರ್. ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀ ಶಿವಕುಮಾರ ಗುಂದಗಿ, ಶ್ರೀ ಅಂಬೋರೆ ಪಿ. ಸತೀಶ್, ಎಲ್.ಐ.ಸಿ ಎಂಪ್ಲಾಯಿಸ್ ಕೋ-ಆಪರೆಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ, ಟೀಚರ್ಸ್ ಕೋ-ಆಪ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ದಿನಕರ ಶೆಟ್ಟಿ, ನಾರಾಯಣ ಗುರು ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹರಿಶ್ಚಂದ್ರ ಅಮೀನ್, ಮಹಾಲಕ್ಷ್ಮಿ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ., ಭಟ್ಕಳ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಮೆಹಬೂಬಿ ಪಟೇಲ್, ಹಾಗೂ ಮಹಾಮಂಡಳದ ಮಾಜಿ ನಿರ್ದೇಶಕರು ಅಂಕೋಲಾ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಜೇಂದ್ರ ಶಾಂಭ ಶೆಟ್ಟಿ ಇವರುಗಳು ವಿಚಾರ ಸಂಕಿರಣದ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಉತ್ತಮ ಆಡಳಿತ ಮತ್ತು ವೃತ್ತಿಪರತೆ, ಮತ್ತು ಭಾರತೀಯ ರಿಜರ್ವ್ ಬ್ಯಾಂಕ್‌ನ ಇತ್ತೀಚಿನ ನಿರ್ದೇಶನಗಳ ಕುರಿತು ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ್ ಭಟ್ ಅವರು ಉಪನ್ಯಾಸ ನೀಡಿದರು. ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನ್ವಯಿಸುವ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಇತ್ತೀಚಿನ ತಿದ್ದುಪಡಿಗಳ ವಿಷಯದ ಕುರಿತು ಶ್ರೀ ಗುರುಸ್ವಾಮಿ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು ಇವರು ಉಪನ್ಯಾಸ ನೀಡಿದರು.

ಮಹಾಮಂಡಳದ ಉಪ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಅನಿಲ ಹೆಚ್. ಕಿರೇಸೂರರವರು ವಿಚಾರ ಸಂಕಿರಣಕ್ಕೆ ಆಗಮಿಸಿದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಸ್ವಾಗತಿಸಿ. ಎಲ್.ಐ.ಸಿ. ಎಂಪ್ಲಾಯಿಸ್ ಕೋ-ಆಪರೇಟಿವ್ ಬ್ಯಾಂಕ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಶಶಿಕಲಾ ಅವರು ಅತಿಥಿಗಳು ಮತ್ತು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಎಲ್ಲಾ ಪ್ರತಿನಿಧಿಗಳಿಗೆ ವಂದನೆಗಳನ್ನು ಅರ್ಪಿಸಿದರು.

2 ಭಾರತದ ಮೊದಲ ಎಟಿಎಂ ಎಲ್ಲಿ ಸ್ಥಾಪಿಸಲಾಯಿತು
4 ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ : ರೂ.2500 ಕೋಟಿಗೂ ಮಿಕ್ಕಿದ ದಾಖಲೆಯ ವ್ಯವಹಾರದ ಸಾಧನೆ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಹಿರಿಯ ಪೋಷಕರ ರಕ್ಷಣೆಗೆ ಧಾವಿಸಿದ ಸುಪ್ರೀಂ ಕೋರ್ಟ್

ಸುಪ್ರೀಂ ಕೋರ್ಟ್ ಇತ್ತೀಚೆಗೆ ಮೂರು ಮಹತ್ವದ ಕೋರ್ಟ್ ಆದೇಶಗಳನ್ನು ಹೊರಡಿಸಿದೆ. ಅವುಗಳಲ್ಲೊಂದು, ಮಕ್ಕಳು ತಮ್ಮ ಪೋಷಕರನ್ನು ನೋಡಿಕೊಳ್ಳದಿದ್ದ ಮೇಲೆ ಅವರಿಗೆ ಪೋಷಕರ ಆಸ್ತಿಯಲ್ಲಿ ಯಾವುದೇ ಅಧಿಕಾರ ಇರುವುದಿಲ್ಲ ಎನ್ನುವುದು. ವೃದ್ಧಾಪ್ಯದಲ್ಲಿ ಪೋಷಕರನ್ನು ಸರಿಯಾಗಿ ನೋಡಿಕೊಳ್ಳದ ಮಕ್ಕಳನ್ನು ಮನೆಯಿಂದ ಹೊರಹಾಕುವ ಸಂಪೂರ್ಣ ಅಧಿಕಾರ ನ್ಯಾಯಾಧೀಕರಣಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ. ತಂದೆ-ತಾಯಿ ಮತ್ತು ಹಿರಿಯ ನಾಗರಿಕರ ಪೋಷಣೆ ಮತ್ತು ಕಲ್ಯಾಣ ಕಾಯಿದೆ- 2007ರ ಅನ್ವಯ ಹಿರಿಯ ನಾಗರಿಕರ ರಕ್ಷಣೆ, ಭದ್ರತೆ ಮತ್ತು ಗೌರವಯುತ ಜೀವನವನ್ನ ಖಚಿತಪಡಿಸಿಕೊಳ್ಳಲು ಈ ಕ್ರಮ ಅತ್ಯಗತ್ಯ ಎಂದೂ ಹೇಳಿದೆ.

ಇತ್ತೀಚಿನ ದಿನಗಳಲ್ಲಿ ವೃದ್ಧ ಪೋಷಕರನ್ನು ಪುಣ್ಯಕ್ಷೇತ್ರಗಳ ಬಳಿ, ಅನಾಥಾಶ್ರಮಗಳ ಬಳಿ, ವಾಹನ ನಿಲ್ದಾಣಗಳ ಬಳಿ ಮಕ್ಕಳು ತೊರೆದು ಹೋದ ವರದಿಗಳು ಕಾಣಿಸುತ್ತಿವೆ. ವೃದ್ಧ ಪೋಷಕರನ್ನು ಎಲ್ಲೆಂದರಲ್ಲಿ ಬಿಟ್ಟು ಹೋಗುವವರು ಅವರುಗಳನ್ನು ಜತನದಿಂದ ನೋಡಿ ಕೊಳ್ಳಬೇಕಾದ ಮಕ್ಕಳೇ ಆಗಿರುವುದು ವಿಷಾಧನೀಯವೆಂದೇ ಹೇಳಬೇಕಾಗಿದೆ. ಇದೇ ಬೆಂಗಳೂರಿನಲ್ಲಿ ಮಗನೊಬ್ಬ ತನ್ನ ವೃದ್ಧ ಪೋಷಕರನ್ನು ವಿದೇಶಕ್ಕೆ ಕರೆದೊಯ್ಯುವುದಾಗಿ ಹೇಳಿ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೇ ಬಿಟ್ಟುಹೋಗಿದ್ದ ಘಟಣೆ ವರದಿಯಾಗಿತ್ತು.

ನಿಮಗೆಲ್ಲ ಬಾಲ್ಯದಲ್ಲಿ ಓದಿದ್ದ ಈ ಕಥೆ ನೆನಪಿರಬೇಕು; ಶ್ರವಣಕುಮಾರ ಎಂಬ ಯುವಕನೊಬ್ಬ ತನ್ನ ವೃದ್ಧ ಪೋಷಕರ ಸೇವೆಯೇ ದೇವರ ಸೇವೆ, ತನ್ನ ಬಾಳಿನ ಗುರಿ, ಪರಮಾರ್ಥ ಎಂದು ಭಾವಿಸಿದ್ದ. ತನ್ನ ವೃದ್ಧ ಪೋಷಕರನ್ನು ಪುಣ್ಯಕ್ಷೇತ್ರಗಳ ದರ್ಶನ ಮಾಡಿಸುವ ಸಲುವಾಗಿ ಅವರುಗಳನ್ನು ಕಾವಡಿಯಲ್ಲಿ ಹೊತ್ತು ಕಾಲ್ನಡಿಗೆಯಲ್ಲಿ ಪುಣ್ಯಕ್ಷೇತ್ರಗಳ ದರ್ಶನ ಮಾಡಿಸುತ್ತಾನೆ. ಆದರೆ, ಇಂದು ಪೂರೆಯ ಬೇಕಾದ ಮಕ್ಕಳೇ ಅವರುಗಳನ್ನು ತೊರೆದು ಹೋಗುತ್ತಿದ್ದಾರೆ.

ಪ್ರಸ್ತುತ ಸಮಾಜದಲ್ಲಿ ಈ ರೀತಿಯಾಗಿ ವೃದ್ಧ ಪೋಷಕರನ್ನು ಬಿಟ್ಟು ಹೋಗುತ್ತಿರುವ ಸುದ್ದಿಗಳು ನಿತ್ಯವೂ ವರದಿಯಾಗುತ್ತಿವೆ. ವೃದ್ಧ ಪೋಷಕರನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸೇರಿಸಿ, ಬಿಟ್ಟು ಹೋಗುತ್ತಿರುವ ವರದಿಗಳು ಬರುತ್ತಿವೆ. ಹಿಂದೆ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಒಂದರಲ್ಲೇ 150ಕ್ಕೂ ಹೆಚ್ಚು ಹಿರಿಯ ನಾಗರಿಕರನ್ನು ಚಿಕಿತ್ಸೆಯ ನೆಪದಲ್ಲಿ ದಾಖಲಿಸಿದ ಮಕ್ಕಳು ತೊರೆದು ನಾಪತ್ತೆಯಾದ ಪ್ರಕರಣಗಳು ನಡೆದಿದೆ. ರಾಜ್ಯದ ಉಳಿದ ವೈದ್ಯಕೀಯ ಸಂಸ್ಥೆಗಳಲ್ಲಿ ಇಂತಹ ಹಲವಾರು ಪ್ರಕರಣಗಳು ದಾಖಲಾಗಿವೆ ಎನ್ನುವುದನ್ನು ನೋಡಿದರೆ ಇಂದಿನ ಸಮಾಜ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದು ಅರ್ಥವಾಗುತ್ತದೆ.

ಕೆಲವರು ಆರ್ಥಿಕ ಸಂಕಷ್ಟಗಳಿಂದ ಈ ರೀತಿಯಾಗಿ ಬಿಟ್ಟು ಹೋಗಿದ್ದರೇ, ಉಳಿದವರು ಆಸ್ತಿಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡ ನಂತರ ತಮ್ಮ ಪೋಷಕರನ್ನು ಹೀಗೆ ತೊರೆದುಹೋಗುತ್ತಿದ್ದಾರೆ. ಇಂತಹ ಪ್ರಕರಣಗಳು ಕಂಡುಬಂದ ತಕ್ಷಣವೇ ಸಂಬಂಧಪಟ್ಟ ಸ್ಥಳೀಯ ಕಂದಾಯ ಉಪ ವಿಭಾಗಾಧಿಕಾರಿಗಳು ಪೋಷಕರು ತಮ್ಮ ಮಕ್ಕಳ ಪರವಾಗಿ ಮಾಡಿರುವ ವಿಲ್ ಅಥವಾ ಆಸ್ತಿ ವರ್ಗಾವಣೆಯನ್ನು ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಬೇಕಿದೆ. ಅವರುಗಳ ರಕ್ಷಣೆಗೆ ಧಾವಿಸಬೇಕಿದೆ. ಸುಪ್ರೀಂ ಕೋರ್ಟ್‌ನ ತೀರ್ಪಿನಿಂದಲಾದರೂ ಮುಂದಿನ ದಿನಗಳಲ್ಲಿ ಇಂತಹ ಅಮಾನವೀಯ ಕೃತ್ಯಗಳು ನಡೆಯದಿರಲೆಂದು ಆಶಿಸೋಣ.

▸▸ ಎಚ್.ಕೆ. ಪಾಟೀಲ

## ಭಾರತದ ಮೊದಲ ಎಟಿಎಂ ಎಲ್ಲಿ ಸ್ಥಾಪಿಸಲಾಯಿತು

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎಟಿಎಂಗಳು ತಂದ ಕ್ರಾಂತಿಯ ಬಗ್ಗೆ ವಿಶೇಷವಾಗಿ ಹೇಳಬೇಕಾಗಿಲ್ಲ. ಎಟಿಎಂ ಬಂದ ನಂತರ ಬ್ಯಾಂಕಿಂಗ್ ವ್ಯವಹಾರವೇ ಬದಲಾಯಿತು. ಹಾಗಾದರೆ, ಭಾರತದ ಮೊದಲ ಎಟಿಎಂ ಎಲ್ಲಿದೆ. ಎಟಿಎಂ ಎಂದರೆ ಆಟೋಮೇಟೆಡ್ ಟೆಲ್ಲರ್ ಮೆಷಿನ್.

ಬ್ಯಾಂಕಿಗೆ ಹೋಗದೆ ಹಣ ವಿತ್‌ಡ್ರಾ ಮಾಡಲು ಬಳಸುವ ಯಂತ್ರವಿದು. ಎಟಿಎಂ ಕಾರ್ಡ್ ಮತ್ತು ಪಿನ್ ಬಳಸಿ, ಹಣ ತೆಗೆಯುವುದು, ಬ್ಯಾಲೆನ್ಸ್ ಚೆಕ್ ಮಾಡುವುದು, ಮಿನಿ ಸ್ಟೇಟ್‌ಮೆಂಟ್ ಪಡೆಯುವಂತಹ ಸೇವೆಗಳನ್ನು ಗ್ರಾಹಕರು ಪಡೆಯಬಹುದು.

ಭಾರತದಲ್ಲಿ ಮೊದಲ ಎಟಿಎಂ ಅನ್ನು 1987ರಲ್ಲಿ ಮುಂಬೈನಲ್ಲಿ ಸ್ಥಾಪಿಸಲಾಯಿತು. ಎಚ್‌ಎಸ್‌ಬಿಸಿ (HSBC) ಬ್ಯಾಂಕ್ ತನ್ನ ಮುಂಬೈ ಶಾಖೆಯಲ್ಲಿ ಈ ಎಟಿಎಂ ಸೇವೆಯನ್ನು ಆರಂಭಿಸಿತು. ಆ ಸಮಯದಲ್ಲಿ, ಇದು ಭಾರತಕ್ಕೆ ಸಂಪೂರ್ಣ ಹೊಸ ಬಗೆಯ ಬ್ಯಾಂಕಿಂಗ್ ಸೌಲಭ್ಯವಾಗಿತ್ತು.

1987ಕ್ಕಿಂತ ಮೊದಲು, ಜನರಿಗೆ ಹಣ ಬೇಕಿದ್ದರೆ ಬ್ಯಾಂಕ್ ಶಾಖೆಗೆ ಹೋಗಲೇಬೇಕಿತ್ತು. ಅಲ್ಲಿ ಬ್ಯಾಂಕ್ ಸಿಬ್ಬಂದಿಯ ಸಹಾಯದಿಂದ ಹಣ ಪಡೆಯಬೇಕಿತ್ತು. ಕೆಲವೊಮ್ಮೆ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಇತ್ತು. ಎಟಿಎಂ ಬಂದ ನಂತರ, ಬ್ಯಾಂಕ್ ಕೌಂಟರ್‌ಗಳ ಮೇಲಿನ ಅವಲಂಬನೆ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು.

ಆರಂಭದಲ್ಲಿ, ಜನರು ಮುಖ್ಯವಾಗಿ ನಗದು ವಿತ್‌ಡ್ರಾ ಮಾಡಲು ಎಟಿಎಂ ಬಳಸುತ್ತಿದ್ದರು. ಕಾಲಾನಂತರದಲ್ಲಿ, ಎಟಿಎಂಗಳಲ್ಲಿ ಹಲವು ಹೊಸ ಸೌಲಭ್ಯಗಳು ಲಭ್ಯವಾದವು. ನಗದು ಹಿಂಪಡೆಯುವುದರ ಜೊತೆಗೆ, ಖಾತೆಯ ಬ್ಯಾಲೆನ್ಸ್ ಪರಿಶೀಲನೆ ಮತ್ತು ಮಿನಿ ಸ್ಟೇಟ್‌ಮೆಂಟ್ ಪಡೆಯುವಂತಹ ಸೇವೆಗಳೂ ಸೇರಿಕೊಂಡವು.

ಮುಂಬೈನಲ್ಲಿ ಆರಂಭವಾದ ಎಟಿಎಂ ಸೇವೆಗಳು ಕ್ರಮೇಣ ದೇಶದ ಇತರ ನಗರಗಳು ಮತ್ತು ಪ್ರದೇಶಗಳಿಗೆ ವಿಸ್ತರಿಸಿದವು. ಪ್ರಸ್ತುತ ಯುಪಿಐ ಮತ್ತು ಡಿಜಿಟಲ್ ಪಾವತಿಗಳು ಹೆಚ್ಚಾಗಿದ್ದರೂ, ಅಗತ್ಯವಿದ್ದಾಗ ನಗದು ಪಡೆಯಲು ಎಟಿಎಂಗಳು ಇಂದಿಗೂ ಪ್ರಮುಖ ಪಾತ್ರ ವಹಿಸುತ್ತವೆ.

ರಿಸರ್ವ್ ಬ್ಯಾಂಕ್ ಡೇಟಾ ಪ್ರಕಾರ, ಭಾರತದಲ್ಲಿ ಇದುವರೆಗೂ 2,51,057 ಎಟಿಎಂ ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, ಕೋಟ್ಯಾಂತರ ಮಂದಿ ಎಟಿಎಂನಿಂದ ಪ್ರಯೋಜನ ಪಡೆದು ಕೊಳ್ಳುತ್ತಿದ್ದಾರೆ. ಇದರಲ್ಲಿ 1,33,544 ಎಟಿಎಂಗಳು ಸಾರ್ವಜನಿಕ ವಲಯದ ಬ್ಯಾಂಕ್‌ಗಳಾಗಿದ್ದರೇ, 77,117 ಎಟಿಎಂ ಮಷೀನ್‌ಗಳು ಖಾಸಗಿ ವಲಯದ ಬ್ಯಾಂಕಿಗೆ ಸೇರಿದ್ದಾಗಿವೆ. ಇನ್ನು 36,216 ಮಷೀನ್‌ಗಳು ಬ್ಯಾಂಕೇತರ ಎಟಿಎಂಗಳಾಗಿವೆ.

## ನೂತನ ಸಹಕಾರ ಸಚಿವ ಲಕ್ಷ್ಮಣ ಸವದಿ ಅವರಿಗೆ ಅಭಿನಂದನೆ ಸಲ್ಲಿಕೆ

ಕರ್ನಾಟಕ ಸರ್ಕಾರದ ಸನ್ಮಾನ್ಯ ಸಹಕಾರ ಸಚಿವರಾದ ಶ್ರೀ ಲಕ್ಷ್ಮಣ ಸವದಿಯವರನ್ನು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಪರವಾಗಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ವತಿಯಿಂದ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ಹಾಗೂ ಮುಖ್ಯಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಪುಂಡಲಿಕ ಎನ್. ಕೇರೂರೆ ಇವರುಗಳು ಸಚಿವರಿಗೆ ಮಹಾಮಂಡಳದ ಆಡಳಿತ ಮಂಡಳಿಯ ಪರವಾಗಿ ಶುಭಕೋರಿ ಅಭಿನಂದನೆ ಸಲ್ಲಿಸಿದರು.



## ಸಹಕಾರ ಸಚಿವ ಲಕ್ಷ್ಮಣ ಸವದಿಗೆ ಅಭಿನಂದನೆ

ಸಹಕಾರ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಲಕ್ಷ್ಮಣ ಸವದಿ ಅವರನ್ನು ದಿ ಮಲ್ಲೇಶ್ವರಂ ಕೋ ಅಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಹಾಗೂ ಮಹಾಮಂಡಳದ ನಿರ್ದೇಶಕರಾದ ಶ್ರೀ ಎನ್.ಎಂ. ಸುರೇಶ್ ಅವರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಹಿರಿಯ ಸದಸ್ಯ ಸಾ.ರಾ. ಗೋವಿಂದು ಅವರೊಂದಿಗೆ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.



## ರಿಸರ್ವ್ ಬ್ಯಾಂಕ್ ಕೇಂದ್ರ ಮಂಡಳಿಗೆ ಇಸ್ರೋ ಮಾಜಿ ಅಧ್ಯಕ್ಷ ಎಸ್. ಸೋಮನಾಥ್ ನೇಮಕ

**ಮುಂಬೈ:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮಾಜಿ ಅಧ್ಯಕ್ಷ ಎಸ್. ಸೋಮನಾಥ್ ಅವರನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಮಂಡಳಿಯಲ್ಲಿ ಅರೆಕಾಲಿಕ, ಅನಧಿಕೃತ ನಿರ್ದೇಶಕರಾಗಿ ನೇಮಿಸಲಾಗಿದೆ.



ಜನವರಿ 2025ರಲ್ಲಿ ಇಸ್ರೋದಿಂದ ನಿವೃತ್ತರಾದ ಸೋಮನಾಥ್, ಆಗಸ್ಟ್ 20, 2026 ರಿಂದ ಜಾರಿಗೆ ಬರುವಂತೆ ನಾಲ್ಕು ವರ್ಷಗಳ ಕಾಲ ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಮಂಡಳಿಯಲ್ಲಿ ಸೇವೆ ಸಲ್ಲಿಸಲಿದ್ದಾರೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಏರೋಸ್ಪೇಸ್ ಎಂಜಿನಿಯರ್ ಬಾಹ್ಯಾಕಾಶ ಕಾರ್ಯಕ್ರಮದಲ್ಲಿ ವಿವಿಧ ಹುದ್ದೆಗಳಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ. ಇಸ್ರೋದಿಂದ ನಿವೃತ್ತರಾದ ನಂತರ, ಅವರನ್ನು ಬೆಂಗಳೂರು ಬಳಿಯ ಲಿಬರಲ್ ಆರ್ಟ್ಸ್ ವಿಶ್ವವಿದ್ಯಾಲಯವಾದ ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಿಸಲಾಯಿತು. ಏತನ್ಮಧ್ಯೆ, ಆರ್‌ಬಿಐ ಬಿಲಿಯನೇರ್ ಆನಂದ್ ಮಹೀಂದ್ರಾ ಅವರನ್ನು ನಾಲ್ಕು ವರ್ಷಗಳ ಮತ್ತೊಂದು ಅವಧಿಗೆ ಕೇಂದ್ರ ಮಂಡಳಿಯಲ್ಲಿ ಅರೆಕಾಲಿಕ, ಅನಧಿಕೃತ ನಿರ್ದೇಶಕರಾಗಿ ನೇಮಿಸಲಾಗಿದೆ ಎಂದು ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಮಂಡಳಿಯ ಇತರ ಸದಸ್ಯರಲ್ಲಿ ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕ ಸೇವೆಯಿಂದ ನಿವೃತ್ತರಾದ, ನಂತರ ಸರ್ಕಾರಿ ಲೆಕ್ಕಪತ್ರಗಳ ಉಪ ನಿಯಂತ್ರಕ ಮತ್ತು ಲೆಕ್ಕಪರಿಶೋಧಕ ಜನರಲ್ ಆದ ರೇವತಿ ಅಯ್ಯರ್ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಸಂಶೋಧನೆ ಮತ್ತು ಮಾಹಿತಿ ವ್ಯವಸ್ಥೆಯ (RIS) ಥಿಂಕ್ ಟ್ಯಾಂಕ್‌ನ ಮಹಾನಿರ್ದೇಶಕ ಸಚಿನ್ ಚತುರ್ವೇದಿ ಸೇರಿದ್ದಾರೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಉಪ ಗವರ್ನರ್‌ಗಳಾದ ಸ್ವಾಮಿನಾಥನ್ ಜೆ, ಪೂನಂ ಗುಪ್ತಾ, ಎಸ್‌ಸಿ ಮುರ್ಮು ಮತ್ತು ರೋಹಿತ್ ಜೈನ್, ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅನುರಾಧಾ ಠಾಕೂರ್ ಮತ್ತು ಹಣಕಾಸು ಸೇವೆಗಳ ಕಾರ್ಯದರ್ಶಿ ಸಂಜಯ್ ಲೋಹಿಯಾ ಕೂಡ ಕೇಂದ್ರ ಮಂಡಳಿಯ ಸದಸ್ಯರಾಗಿದ್ದಾರೆ.

## ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ : ರೂ.2500 ಕೋಟಿಗೂ ಮಿಕ್ಕಿದ ದಾಖಲೆಯ ವ್ಯವಹಾರದ ಸಾಧನೆ




ರಾಜ್ಯದ ಪ್ರತಿಷ್ಠಿತ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕಿನ 2025–26ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯು ದಿನಾಂಕ : 16–08–2026 ರಂದು ಶಿರಸಿಯ ರಾಯರಪೇಟೆಯ ವಿದ್ಯಾಧಿರಾಜ ಕಲಾಕ್ಷೇತ್ರದಲ್ಲಿ ಯಶಸ್ವಿಯಾಗಿ ನೆರವೇರಿಸಿತು. ಬ್ಯಾಂಕಿನ ಪ್ರಗತಿಯ ವಿವರಣೆಯನ್ನು ಅಧ್ಯಕ್ಷರಾದ ಶ್ರೀ ಜಯದೇವ ಯು. ನಿಲೇಕಣಿಯವರು ವಾರ್ಷಿಕ ಸರ್ವಸಾಧಾರಣ ಸಭೆಯನ್ನುದ್ದೇಶಿಸಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು. ಬ್ಯಾಂಕು ಒಟ್ಟು ವ್ಯವಹಾರವನ್ನು ರೂ.2575 ಕೋಟಿಗೆ ದಾಖಲಿಸಿ 2025–26 ನೇ ಸಾಲಿನಲ್ಲಿ ಹೊಸ ಮೈಲಿಗಲ್ಲು ದಾಟಿರುವುದನ್ನು ಸದಸ್ಯರು ಸಭೆಯಲ್ಲಿ ಶ್ಲಾಘಿಸಿದರು.

ಬ್ಯಾಂಕು ಆರ್ಥಿಕ ವರ್ಷದಲ್ಲಿ ತನ್ನ ಒಟ್ಟು ಠೇವಣಿಯನ್ನು ರೂ.1513.07 ಕೋಟಿಗಳಿಗೆ, ದುಡಿಯುವ ಬಂಡವಾಳವನ್ನು ರೂ.1767.78 ಕೋಟಿಗಳಿಗೆ ಹೆಚ್ಚಿಸುವುದರೊಂದಿಗೆ ರೂ.13.59 ಕೋಟಿ ನಿವ್ವಳ ಲಾಭವನ್ನು ದಾಖಲಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಯದೇವ ಯು. ನಿಲೇಕಣಿಯವರು ವಾರ್ಷಿಕ ಸರ್ವಸಾಧಾರಣ ಸಭೆಯನ್ನುದ್ದೇಶಿಸಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು. ಬ್ಯಾಂಕಿನ ಈ ಪ್ರಗತಿಗೆ ಶೇರುದಾರ ಸದಸ್ಯರು ನೀಡಿದ ಬೆಂಬಲಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ಬ್ಯಾಂಕು ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಸಂಪೂರ್ಣ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಿದ್ದು, ಮುಂಬರುವ ದಿನದಲ್ಲಿ ನೆರೆಯ ಗೋವಾ ರಾಜ್ಯಕ್ಕೂ ವಿಸ್ತರಿಸುವ ಕಾರ್ಯಯೋಜನೆಯನ್ನು ಹೊಂದಿರುವುದಾಗಿ ಅಧ್ಯಕ್ಷರಾದ ಶ್ರೀ ಜಯದೇವ ಯು. ನಿಲೇಕಣಿಯವರು ಸರ್ವಸಾಧಾರಣ ಸಭೆಯಲ್ಲಿ ತಿಳಿಸಿದರು. ಈ ಪ್ರಸ್ತಾವನೆಗೆ ಹಾಜರಿದ್ದ ಸದಸ್ಯರಿಂದ ಒಮ್ಮತದ ಅನುಮೋದನೆ ದೊರೆತು, ಬ್ಯಾಂಕು ರಾಜ್ಯವ್ಯಾಪಿ ಶಾಖೆಗಳನ್ನು ತೆರೆಯುವುದರ ಜೊತೆಗೆ ಗೋವಾ ರಾಜ್ಯಕ್ಕೂ ಕಾರ್ಯವ್ಯಾಪ್ತಿ ವಿಸ್ತರಿಸಿ ವ್ಯವಹಾರ ಅಭಿವೃದ್ಧಿ ಹೊಂದುವಂತಾಗಲೆಂದು ಸದಸ್ಯರು ಹಾರೈಸಿದರು.

ಈ ಸಂದರ್ಭದಲ್ಲಿ ಉತ್ಕೃಷ್ಟ ಸಾಧನೆ ಮಾಡಿದ ಬ್ಯಾಂಕಿನ ದಾಂಡೇಲಿ ಶಾಖಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳಿಗೆ ಅವರ ಈ ಸಾಧನೆಗಾಗಿ ಸಭೆಯಲ್ಲಿ ಅಭಿನಂದಿಸಿ ಪ್ರಶಸ್ತಿ ಪತ್ರವನ್ನು ನೀಡಲಾಯಿತು. ಅದೇ ರೀತಿ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸಿಬ್ಬಂದಿಗಳಾದ ಶ್ರೀ ದೀಪಕ ಜಿ. ಅಂಕೋಲೇಕರ, ಶ್ರೀ ಉಮೇಶ ಎನ್. ಶೆಟ್ಟಿ, ಶ್ರೀ ರಾಮಚಂದ್ರ ಎನ್. ಪೈ, ಶ್ರೀ ಜಗದೀಶ ಎಸ್. ಜೋಗಳೇಕರ, ಶ್ರೀಮತಿ ಬಿಬಿರ್ಯಾಕಿರಾ ಮುಲ್ಲಾ, ಶ್ರೀ ಅನಿಲಕುಮಾರ ವಿ. ನಾಯ್ಕ, ಶ್ರೀ ನಾಸೀರ ಎ. ಖಾನ್ ಮತ್ತು ಶ್ರೀ ದತ್ತಾತ್ರೇಯ ಕೆ. ಭಟ್ ರವರನ್ನು ಸಭೆಯಲ್ಲಿ ಉಪಸ್ಥಿತರಿದ್ದ ಆಡಳಿತ ಮಂಡಳಿಯ ಸದಸ್ಯರು ಬ್ಯಾಂಕಿನ ಹಾಗೂ ಶೇರುದಾರ ಸದಸ್ಯರ ಪರವಾಗಿ ಗೌರವಿಸಿ ಸನ್ಮಾನಿಸಿದರು.

## ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್ : 106ನೇ ವಾರ್ಷಿಕ ಮಹಾಸಭೆ




ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್ ಲಿ., ನ 106ನೇ ವಾರ್ಷಿಕ ಮಹಾಸಭೆಯು 2026ರ ಆಗಸ್ಟ್ 16ರಂದು ಶ್ರೀ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಎಂ.ಸುರೇಶ್ ರವರ ಅಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ನೆರವೇರಿತು.

ಅಧ್ಯಕ್ಷರಾದ ಶ್ರೀ ಎನ್.ಎಂ.ಸುರೇಶ್‌ರವರು ಮಾತನಾಡುತ್ತ ಬೆಂಗಳೂರಿನ ಪ್ರತಿಷ್ಠಿತ ಬ್ಯಾಂಕ್‌ಗಳಲ್ಲಿ ಒಂದಾದ ದಿ ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕ್ ಲಿ., ಪ್ರಸಕ್ತ ಸಾಲಿನಲ್ಲಿ ಒಟ್ಟು 19.28 ಕೋಟಿ ರೂ.ಗಳ ಲಾಭಗಳಿಸಿ ನಿವ್ವಳ ಅನುತ್ಪಾದಕ ಆಸ್ತಿಯು **(NET NPA)** ಶೂನ್ಯಕ್ಕೆ ಇಳಿದಿದೆ ಎಂದು ತಿಳಿಸಿದರು ಹಾಗೂ ಬ್ಯಾಂಕಿನ ಸದಸ್ಯರಿಗೆ ಶೇ.13% ಲಾಭಾಂಶವನ್ನು ನೀಡುವುದಾಗಿ ಪ್ರಕಟಿಸಿದರು. ಇದೇ ಸಂದರ್ಭದಲ್ಲಿ ಮಾತನಾಡುತ್ತ ಕರ್ನಾಟಕ ಸರ್ಕಾರದ ನೂತನ ಸಹಕಾರ ಸಚಿವರಾದ ಶ್ರೀ ಲಕ್ಷ್ಮಣ ಸವದಿಯವರು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಇತ್ತೀಚಿಗೆ 10 ವರ್ಷಗಳ ಸತತ ಸೇವೆ ಪೂರ್ಣಗೊಳಿಸಿದ ಸಹಕಾರಿ ಬ್ಯಾಂಕುಗಳ ನಿರ್ದೇಶಕರ ಬಗ್ಗೆ ರಿಸರ್ವ್ ಬ್ಯಾಂಕ್ ನವರು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಂದಿರುವ ತಿದ್ದುಪಡಿಯನ್ನು ಬಲವಾಗಿ ವಿರೋಧಿಸುವುದಾಗಿ ತಿಳಿಸಿದರು. ಮಾನ್ಯ ಸಹಕಾರ ಸಚಿವರ ಈ ಹೇಳಿಕೆಯನ್ನು ಅಧ್ಯಕ್ಷರು ಸ್ವಾಗತಿಸಿ ಬೆಂಗಳೂರು ನಗರದ ಇನ್ನೂ ಹಲವಾರು ಸಹಕಾರಿ ಬ್ಯಾಂಕುಗಳು ರಿಸರ್ವ್ ಬ್ಯಾಂಕ್ ತಂದಿರುವ ಈ ತಿದ್ದುಪಡಿಯನ್ನು ವಿರೋಧಿಸುತ್ತಿರುವುದಾಗಿ ತಿಳಿಸಿದರು.

## ಹೊಸಕೋಟೆ ಟೌನ್ ಕೋ-ಆಪರೇಟಿವ್ ಬ್ಯಾಂಕ್ : ರೂ.5.28 ಕೋಟಿ ನಿವ್ವಳ ಲಾಭ, ಶೇ.15 ಡಿವಿಡೆಂಡ್



**ಹೊಸಕೋಟೆ:** ದಿನಾಂಕ:16/08/2026ರಂದು ದಿ ಟೌನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಹೊಸಕೋಟೆ ಇದರ 2025–26ನೇ ಸಾಲಿನ 113ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್.ಮಂಜುನಾಥ ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು.

ಬ್ಯಾಂಕಿನ ಅಧ್ಯಕ್ಷರು ಸಭೆಯಲ್ಲಿ ಮಾತನಾಡಿ ದಿನಾಂಕ:31/03/2026ರ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ.11.87 ಕೋಟಿ ಷೇರು ಬಂಡವಾಳ, ರೂ.51.05 ಕೋಟಿ ನಿಧಿಗಳು, ರೂ.297.04 ಕೋಟಿ ಠೇವಣಿಗಳು, ರೂ.163.22 ಕೋಟಿ ಸಾಲ ಮತ್ತು ಮುಂಗಡಗಳು ಮತ್ತು ರೂ.187.12 ಕೋಟಿ ಹೂಡಿಕೆಗಳು ಹಾಗೂ ರೂ.367.66 ಕೋಟಿಗಳ ದುಡಿಯುವ ಬಂಡವಾಳದೊಂದಿಗೆ ಈ ಸಾಲಿನಲ್ಲಿ ಬ್ಯಾಂಕು ಉತ್ತಮ ಆರ್ಥಿಕ ಫಲಿತಾಂಶ ದಾಖಲಿಸಿದ್ದು ಮುಖ್ಯವಾಗಿ ಬ್ಯಾಂಕಿನ ಆರೋಗ್ಯ ಅಳೆಯುವ ಮಾನದಂಡವಾದ ನಿವ್ವಳ ಎನ್.ಪಿ.ಎ ಪ್ರಮಾಣವು ಶೂನ್ಯವಾಗಿರುತ್ತದೆ. ಬ್ಯಾಂಕು 113 ವರ್ಷಗಳನ್ನು ಪೂರೈಸಿರುವ ಈ ಸಂದರ್ಭದಲ್ಲಿ ಬ್ಯಾಂಕಿನ ಆಡಳಿತ ನಡೆಸಲು ಮಾನ್ಯ ಷೇರುದಾರರು ನಮ್ಮ ಆಡಳಿತ ಮಂಡಲಿಗೆ ಅವಕಾಶ ಒದಗಿಸಿಕೊಟ್ಟಿದ್ದಕ್ಕೆ ಷೇರುದಾರರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಬ್ಯಾಂಕು 2025–26ನೇ ಸಾಲಿನಲ್ಲಿ ರೂ.5.28 ಕೋಟಿಯ ದಾಖಲೆಯ ನಿವ್ವಳ ಲಾಭ ಗಳಿಸುವುದರ ಮೂಲಕ ಅತ್ಯುತ್ತಮವಾಗಿ ಪ್ರಗತಿಯನ್ನು ಸಾಧಿಸಿರುತ್ತದೆ. ಷೇರುದಾರರಿಗೆ 2025–26ನೇ ಸಾಲಿಗೆ ಶೇ.15.00ರಷ್ಟು ಡಿವಿಡೆಂಡ್ ಪಾವತಿಸಲು ಮಹಾಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಒಂದು ಆರ್ಥಿಕ ಫಲಿತಾಂಶದ ಸಾಧನೆಗೆ ಸಹಕರಿಸಿದ ಮಾನ್ಯ ಸದಸ್ಯರಿಗೆ, ಠೇವಣಿದಾರರಿಗೆ ಹಾಗೂ ಗ್ರಾಹಕರಿಗೆ ಬ್ಯಾಂಕಿನ ಪರವಾಗಿ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಮಾನ್ಯ ಸದಸ್ಯರು ತಮ್ಮೆಲ್ಲಾ ಕೆಲಸಗಳನ್ನು ಬದಿಗೊತ್ತಿ ಈ ಮಹಾಸಭೆಗೆ ಆಗಮಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿರುತ್ತೀರಿ ಅದಕ್ಕಾಗಿ ಸದಸ್ಯರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು.

ಬ್ಯಾಂಕಿನ ಹಿರಿಯ ನಿರ್ದೇಶಕರಾದ ಶ್ರೀ ಎನ್.ನಾಗರಾಜ್ ರವರು ಸ್ವಾಗತ ಭಾಷಣ ನೆರವೇರಿಸಿದರು.ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಅಕ್ಬರ್ ಪಾಷ, ನಿರ್ದೇಶಕರಾದ ಶ್ರೀ ಹೆಚ್.ಎಸ್.ಗೋಪಾಲ @ ಗೋಪಿ, ಶ್ರೀ ಎ.ಅಫ್ಸರ್, ಶ್ರೀ ಕೆ.ಕಿರಣ್, ಶ್ರೀ ಕೆ.ಕಿರಣ್ ಕುಮಾರ್, ಶ್ರೀ ಬಿ.ನಾಗರಾಜು, ಶ್ರೀ ಜಿ.ಯು.ವಿಷ್ಣು, ಶ್ರೀ ಎಸ್.ಮುರಳಿ, ಶ್ರೀ ಎನ್.ಬಾಲಚಂದ್ರನ್, ಶ್ರೀಮತಿ ಬಿ.ವೆಂಕಟಲಕ್ಷ್ಮಿ, ಶ್ರೀಮತಿ ಎಂ.ಸರೋಜಮ್ಮ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಹೆಚ್.ಕೆ.ವಿಕ್ರಮ್ ಮತ್ತು ಶ್ರೀ ಆರ್.ಮಂಜುನಾಥ ರವರು ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶ್ರೀ ಎಂ.ಕಿರಣ್, ಶ್ರೀ ಇ.ಸದ್ದಾಂಹುಸೇನ್ ಮತ್ತು ಶ್ರೀ ಹೆಚ್.ವಿ.ಶರತ್‌ಕುಮಾರ್ ರವರು ಸಭೆಯಲ್ಲಿ ಉಪಸ್ಥಿತರಿದ್ದರು.ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎ.ನಾಗರಾಜ ರವರು ವಾರ್ಷಿಕ ಮಹಾಸಭೆಯಲ್ಲಿ ವಿಷಯಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ವಿವರಗಳನ್ನು ಮಂಡಿಸಿದರು.

## ಶಿವಮೊಗ್ಗ ಅರೆಕಾನಟ ಮಂಡಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕಿನ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಗೌರವಿಸಲಾಯಿತು

**ಶಿವಮೊಗ್ಗ :** ದಿನಾಂಕ : 20–08–2026 ರಂದು, ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ, ಶಿವಮೊಗ್ಗ ಅರೆಕಾನಟ ಮಂಡಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅನ್ನು ಅದರ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಗುರುತಿಸಿ ಗೌರವಿಸಲಾಯಿತು.



ಈ ಸಂದರ್ಭದಲ್ಲಿ, ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಡಿ.ಎಂ. ಹರೀಶ್, ನಿರ್ದೇಶಕರಾದ ಶ್ರೀ ಎಂ. ವಿ. ವಿನಾಯಕ್, ಡಿ. ಮಂಜಪ್ಪ ಗೋಪಾಲ್, ಸುರೇಶ್ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಚಂದ್ರಮೌಳಿಯವರು ಬ್ಯಾಂಕಿನ ಪರವಾಗಿ ಗೌರವವನ್ನು ಸ್ವೀಕರಿಸಿದರು.

# ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆ, ರೂ. 1.15 ಕೋಟಿ ನಿವ್ವಳ ಲಾಭ : ಶೇ. 16 ಡಿವಿಡೆಂಡ್

**ಬೆಂಗಳೂರು :** ಬೆಂಗಳೂರಿನ ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕಿನ 2025-26ನೇ ಸಾಲಿನ ವಾರ್ಷಿಕ ಮಹಾಸಭೆಯು ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ದಿನಾಂಕ 16.08.2026ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ನಂಜೇಗೌಡ ರವರ ಅಧ್ಯಕ್ಷತೆಯಲ್ಲಿ ನಡೆದಿದ್ದು. 2025-26ನೇ ಸಾಲಿನಲ್ಲಿ ಬ್ಯಾಂಕ್ ರೂ 1.15 ಕೋಟಿ ನಿವ್ವಳ ಲಾಭ ಗಳಿಸಿದೆ.



ಸಭೆಯಲ್ಲಿ ಮಾತನಾಡಿದ ಅಧ್ಯಕ್ಷರು ಬ್ಯಾಂಕ್ 2025-26ನೇ ವರ್ಷಾಂತ್ಯಕ್ಕೆ ರೂ.69.35 ಕೋಟಿ ಸಾಲ ಹೊರಬಾಕಿ ಹಾಗೂ ರೂ.100.38 ಕೋಟಿ ಠೇವಣಿಗಳಿಸಿರುತ್ತದೆ. ಬ್ಯಾಂಕಿನ ಪ್ರತಿಯೊಂದು ಸಾಧನೆಗೂ ಬ್ಯಾಂಕಿನ ಸದಸ್ಯರು, ಗ್ರಾಹಕರು, ಆಡಳಿತ ಮಂಡಳಿ ಸದಸ್ಯರು ಹಾಗು ಸಿಬ್ಬಂದಿಗಳ ಪರಿಶ್ರಮ ಕಾರಣವಾಗಿದೆ. ಬ್ಯಾಂಕಿನ ಸದಸ್ಯರಿಗೆ ಈ ಬಾರಿ ಶೇ.16ರ ರಂತೆ ಡಿವಿಡೆಂಡ್ ಘೋಷಣೆ ಮಾಡಿದ್ದು, ಈಗಾಗಲೇ ಮೂರು ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು, ಇನ್ನು ಹೆಚ್ಚಿನ ಶಾಖೆಗಳನ್ನು ತೆರೆಯಲು ಬ್ಯಾಂಕಿನ ಆಡಳಿತ ಮಂಡಳಿ ಕಾರ್ಯಪ್ರವೃತವಾಗಿದೆ. ಪ್ರತಿ ಬಾರಿಯಂತೆ ಈ ಬಾರಿ 200 ಜನ ಬ್ಯಾಂಕಿನ ಹಿರಿಯ ಸ್ಥಾಪಕ ಸದಸ್ಯರುಗಳಿಗೆ ಸನ್ಮಾನಿಸಲಾಗಿದ್ದು, ಬ್ಯಾಂಕಿನ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಬಾರಿಯಂತೆ ಈ ಬಾರಿಯೂ ಪ್ರತಿಭಾ ಪುರಸ್ಕಾರ ನೀಡಿ ಉತ್ತೇಜನ ನೀಡಲಾಯಿತು.

ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಮಹೇಶ್ ಕುಮಾರ್ ಬಿ.ಎಂ ರವರು ಮಾತನಾಡಿ ಬ್ಯಾಂಕಿನ ಇತಿಹಾಸದಲ್ಲಿ ಮೊದಲ ಬಾರಿಗೆ ರೂ.100 ಕೋಟಿಗೂ ಅಧಿಕ ಠೇವಣಿ ಸಂಗ್ರಹಿಸಿ ಟೈರ್ 1 ಬ್ಯಾಂಕಿನಿಂದ ಟೈರ್ 2 ಬ್ಯಾಂಕಾಗಿ ಪರಿವರ್ತನೆಗೊಂಡಿದೆ. ಇದು ಬ್ಯಾಂಕಿನ ಸದಸ್ಯರು ಹಾಗೂ ಗ್ರಾಹಕರು ಬ್ಯಾಂಕಿನ ಮೇಲೆ ಇರಿಸಿರುವ ವಿಶ್ವಾಸ ಹಾಗೂ ನಂಬಿಕೆಗೆ ಸಾಕ್ಷಿಯಾಗಿದೆಯೆಂದರು.

ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ನಂಜೇಗೌಡರು, ಉಪಾಧ್ಯಕ್ಷರಾದ ಸಿ.ಹೆಚ್ ಶ್ರೀನಿವಾಸರವರು, ಮಾಜಿ ಅಧ್ಯಕ್ಷರಾದ ಕೃಷ್ಣೆಗೌಡರು, ನಿರ್ದೇಶಕರುಗಳಾದ ಎ. ಕೇಶವರವರು, ಡಿ. ಅಶೋಕ್ ರವರು, ಕೆ. ರಾಮಯ್ಯರವರು, ಆರ್. ಶ್ರೀನಿವಾಸಮೂರ್ತಿರವರು, ಜಿ.ದೇವರಾಜುರವರು, ಜಿ. ಕೃಷ್ಣ ರವರು, ಎಂ.ಆರ್. ರಾಜೇಶ್ವರೀರವರು, ಡಿ.ಆರ್. ಸುರೇಖಾರವರು, ಜಿ.ಟಿ. ವೆಂಕಟೇಶ್ ರವರು (ರೇವಣ್ಣ), ಬಿ.ಆರ್. ದೀಪಕ್ ರವರು, ಗೋವಿಂದಪ್ಪ ಮಂಜುನಾಥರವರು, ಬಿ.ಎಸ್. ಶಿವಪ್ರಸಾದ್ ರವರು ಉಪಸ್ಥಿತರಿದ್ದರು.





## ದಿ ಸಿಂದಗಿ ಪಟ್ಟಣ ಸಹಕಾರಿ ಬ್ಯಾಂಕಿನ 62ನೇ ವಾರ್ಷಿಕ ಮಹಾಸಭೆ


**ಸಿಂದಗಿ :** ದಿ ಸಿಂದಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿ., ಸಿಂದಗಿಯ 62ನೇ ವಾರ್ಷಿಕ ಸರ್ವಸಾಧಾರಣ ಮಹಾಸಭೆಯು ದಿನಾಂಕ : 26.07.2026 ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶರಣಪ್ಪ ಎಸ್. ವಾರದ ಇವರ ಘನ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಗೆ ವಿಶೇಷ ಆಹ್ವಾನಿತರಾಗಿ ಸಿಂದಗಿಯ ಶಾಸಕರಾದ ಶ್ರೀ ಅಶೋಕ ಎಮ್. ಮನಗೂಳಿ ಇವರ ಹಿರಿಯ ಸಹೋದರ ಹಾಗೂ ಸಿಂದಗಿ ಸಿ.ಎಮ್. ಮನಗೂಳಿ ಕಾಲೇಜಿನ ನಿವೃತ ಪ್ರಾಚಾರ್ಯರಾದ ಡಾ. ಅರವಿಂದ ಎಮ್ ಮನಗೂಳಿ ಇವರು ಆಗಮಿಸಿದ್ದರು.



62 ವರ್ಷ ಕಂಡ ಬ್ಯಾಂಕು ಈಗ ಪ್ರಸ್ತುತ ರೂ.17.75 ಕೋಟಿ ಸ್ವಂತ ಬಂಡವಾಳ ರೂ.125.84 ಕೋಟಿ ಠೇವಣಿ ರೂ.42.52 ಕೋಟಿ ಹೂಡಿಕೆಗಳು ರೂ.95.75 ಕೋಟಿ ಸಾಲ ಮತ್ತು ಮುಂಗಡಗಳನ್ನು ಕೊಟ್ಟಿದೆ. ಬ್ಯಾಂಕಿನ ಇತಿಹಾಸದಲ್ಲಿಯೇ ಇದೇ ಮೊದಲ ಸಲ ಬ್ಯಾಂಕಿನ GROSS NPA 8.51% & NET NPA * 2.86% ಇಳಿದಿದ್ದು ಅಭೂತಪೂರ್ವ ಸಾಧನೆ ಮಾಡಿದೆ. ವರದಿ ವರ್ಷದಲ್ಲಿ ಬ್ಯಾಂಕು ಆಧಾಯ ತೆರಿಗೆ ಪಾವತಿಸಿದ ನಂತರ ರೂ.1.08 ಕೋಟಿ ಲಾಭ ಗಳಿಸಿದೆ. ಎಲ್ಲ ಸದಸ್ಯ ಭಾಂದವರು ಬ್ಯಾಂಕಿನ ಅಭಿವೃದ್ಧಿ ಕುರಿತು ಮೆಚ್ಚುಗೆ ಮಾತನಾಡಿದರು. ಆಡಳಿತ ಮಂಡಳಿ ಎಲ್ಲ ಸದಸ್ಯರಲ್ಲಿ ಹಾಗೂ ಸಿಬ್ಬಂದಿ ವರ್ಗ, ಪಿಗ್ಮಿ ಸಂಗ್ರಹಗಾರರು ಹಾಗೂ ಠೇವಣಿದಾರರು ಹಾಗೂ ವಿಶೇಷವಾಗಿ ಸರಿಯಾಗಿ ಸಮಯಕ್ಕೆ ಸಾಲ ತುಂಬಿ ಸಹಕರಿಸಿದ ಸದಸ್ಯರನ್ನು ಅಭಿನಂದಿಸಲಾಯಿತು.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**ಪ್ರಶ್ನೆ 1. ನಮ್ಮ ಬ್ಯಾಂಕಿನ ಸ್ವಂತ ಕಟ್ಟಡ ಮತ್ತು ಖಾಲಿ ಸೈಟ್‌ನ್ನು ಇಬ್ಬರು ಮಾಲ್ಯಮಾಪಕರಿಂದ ಮರುಮೌಲ್ಯಮಾಪನ ಮಾಡಿಸಿದ್ದೇವೆ. ಮರುಮೌಲ್ಯಮಾಪನ ಮೀಸಲನ್ನು ಸ್ವಂತ ಬಂಡವಾಳ (Net Worth) ಭಾಗವಾಗಿ ಪರಿಗಣಿಸಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ :** ಮರು ಮೌಲ್ಯ ಮಾಪನ ಮೀಸಲನ್ನು (Revaluation reserve) ಸ್ವಂತ ಬಂಡವಾಳ (Net Worth)ದ ಭಾಗವಾಗಿ ಪರಿಗಣಿಸಲು ಸಾಧ್ಯವಿಲ್ಲ ಆದಾಗ್ಯೂ ಮರುಮೌಲ್ಯಮಾಪನ ಮೀಸಲಿನ ಶೇ. 45ರಷ್ಟನ್ನು ಶ್ರೇಣಿ 1 ಬಂಡವಾಳದ (Tier 1 Capital) ಭಾಗವಾಗಿ ಪರಿಗಣಿಸಬಹುದು.

**ಪ್ರಶ್ನೆ 2. ನಮ್ಮ ಬ್ಯಾಂಕಿನಲ್ಲಿ ಜಂಟಿ ಹೆಸರಿನಲ್ಲಿ ಒಂದು ಠೇವಣಿ ಇದೆ. ಒಬ್ಬ ಖಾತೆದಾರನ ಮರಣದ ನಂತರ ಜೀವಂತವಾಗಿರುವ ಸಹ ಖಾತೆದಾರ, ಖಾತೆ ತೆರೆಯುವಾಗ ಸಲ್ಲಿಸಿರುವ ಮೂಲ ಅರ್ಜಿ ನಮೂನೆಯನ್ನು ನೀಡಲು ಬೇಡಿಕೆ ಇಟ್ಟಿದ್ದಾರೆ ಸಹ ಖಾತೆದಾರರಿಗೆ ಖಾತೆ ಅರ್ಜಿ ನೀಡಬಹುದೇ ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಆರ್.ಬಿ.ಐ. ನಿಯಮಗಳು ಹಾಗೂ ಬ್ಯಾಂಕಿಂಗ್ ಕಾನೂನುಗಳ ಪ್ರಕಾರ ಬ್ಯಾಂಕ್‌ನಲ್ಲಿ ಖಾತೆ ತೆರೆಯುವಾಗ ಸಲ್ಲಿಸುವ ಮೂಲ ಅರ್ಜಿ ನಮೂನೆ, ಕೆ.ವೈ.ಸಿ (KYC) ದಾಖಲೆಗಳು ಮತ್ತು ಸಹಿ ಮಾದರಿಗಳು ಬ್ಯಾಂಕಿನ ಆಂತರಿಕ ಆಸ್ತಿ ಮತ್ತು ಮೂಲ ದಾಖಲೆಗಳಾಗಿರುತ್ತವೆ (Internal Primary Records). ಇವುಗಳನ್ನು ಭವಿಷ್ಯದ ಕಾನೂನು ಪ್ರಕ್ರಿಯೆಗಳು ಅಥವಾ ಆಡಿಟ್ ಪರಿಶೀಲನೆಗಾಗಿ ಬ್ಯಾಂಕ್ ತನ್ನ ವಶದಲ್ಲೇ ಇಟ್ಟುಕೊಳ್ಳಬೇಕಾಗುತ್ತದೆ. ಆದಾಗ್ಯೂ, ಜೀವಂತವಾಗಿರುವ ಸಹ–ಖಾತೆದಾರ (Surviving Joint Holder) ಲಿಖಿತ ಮನವಿ ಸಲ್ಲಿಸಿದರೆ, ಮೂಲ ಅರ್ಜಿ ನಮೂನೆಯ ನಕಲು ಪ್ರತಿಯನ್ನು (Photocopy) ತೆಗೆದು, ಅದಕ್ಕೆ 'Certified True Copy' ಎಂದು ಬ್ಯಾಂಕ್ ಅಧಿಕಾರಿಯ ಮುದ್ರೆ ಮತ್ತು ಸಹಿ ಹಾಕಿ ನೀಡಬಹುದು.

# ಗುಳೇದಗುಡ್ಡದ ಲಕ್ಷ್ಮಿ ಸಹಕಾರ ಬ್ಯಾಂಕ್: ರೂ.1.65 ಕೋಟಿ ಲಾಭ




**ಗುಳೇದಗುಡ್ಡ :** ಸದಸ್ಯರ, ಆಡಳಿತ ಮಂಡಳಿ ಮತ್ತು ಬ್ಯಾಂಕಿನ ಸಿಬ್ಬಂದಿಯ ಶ್ರಮದಿಂದ ಬ್ಯಾಂಕ್ ಈ ವರ್ಷ ರೂ.1.65 ಕೋಟಿ ಲಾಭ ಗಳಿಸಿದೆ ಎಂದು ಲಕ್ಷ್ಮಿ ಸಹಕಾರ ಬ್ಯಾಂಕಿನ ಅಧ್ಯಕ್ಷ ರಾಜಶೇಖರ ಶೀಲವಂತ ಹೇಳಿದರು. ಪಟ್ಟಣದ ಕರನಂದಿಯವರ ರಂಗಮಂದಿರದಲ್ಲಿ ನಡೆದ 2025–26ನೇ ಸಾಲಿನ 111ನೇ ಸದಸ್ಯರ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಸ್ತುತ 2026 ಮಾರ್ಚ್ 31ರ ವರ್ಷಾಂತ್ಯಕ್ಕೆ ದುಡಿಯುವ ಬಂಡವಾಳ ರೂ.33,771.93 ಲಕ್ಷ ಇದೆ. ಕಾಯ್ದಿಟ್ಟ ನಿಧಿ ರೂ.1,880.04 ಆಗಿದೆ. ರೂ.30,592.23 ಲಕ್ಷ ಠೇವಣಿ ಹೊಂದಿದೆ. ಷೇರು ಬಂಡವಾಳ ರೂ.1,185.95 ಲಕ್ಷ ಇದೆ. ಒಟ್ಟು 14,546 ಸದಸ್ಯರಿದ್ದಾರೆ. ರೂ.18,542.69 ಲಕ್ಷ ಸಾಲ ನೀಡಲಾಗಿದ್ದು, ಇದರಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಒಳಗೊಂಡಿದೆ.

ಪ್ರಸ್ತುತ ವರ್ಷ ಸದಸ್ಯರಿಗೆ ಶೇ.8ರಷ್ಟು ಡಿವಿಡೆಂಡ್ ಪಾವತಿಸಲು ಆಡಳಿತ ಮಂಡಳಿ ನಿರ್ಧರಿಸಿದೆ. ಬ್ಯಾಂಕ್ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್, ಎಟಿಎಂ ಸೌಲಭ್ಯ, ಮೊಬೈಲ್ ಬ್ಯಾಂಕಿಂಗ್, ಯುಪಿಐ ಸೌಲಭ್ಯ ಒದಗಿಸಿದೆ ಎಂದರು.

ಪ್ರತಿಭಾವಂತ ವಿದ್ಯಾರ್ಥಿಗಳನ್ನು, ಉತ್ತಮ ಗ್ರಾಹಕರನ್ನು ಗುರುತಿಸಿ ಪ್ರಶಸ್ತಿ ನೀಡಿ ಬ್ಯಾಂಕಿನಿಂದ ಗೌರವಿಸಲಾಯಿತು. ಬ್ಯಾಂಕಿನ ವಾರ್ಷಿಕ ವರದಿಯ ಅಂಕಿ–ಅಂಶಗಳನ್ನು ಪ್ರಧಾನ ವ್ಯವಸ್ಥಾಪಕ ದಾನೇಶ ಕರಣಿ ಹಾಗೂ ಉಪ ಪ್ರಧಾನ ವ್ಯವಸ್ಥಾಪಕ ಎ.ಕೆ.ಕಾಬರಾ ಓದಿದರು.

ಉಪಾಧ್ಯಕ್ಷ ಸಂಪತ್ ಕುಮಾರ ರಾಠಿ, ನಿರ್ದೇಶಕರಾದ ಮುರುಗೇಶ ರಾಜನಾಳ, ಕಮಲ್ ಕಿಶೋರ್ ಮಾಲಪಾಣಿ, ವೀರಣ್ಣ ಕುರಹಟ್ಟಿ, ಗಣೇಶ ಶೀಲವಂತ, ಸಂಜೀವ ಕಾರಕೂನ, ಪರಶುರಾಮ ಪವಾರ, ರವಿ ಅಲದಿ, ಪ್ರಭು ತಟ್ಟಿಮಠ, ಗೋಪಾಲ್ ಹಳ್ಳೂರ, ಬುದಿವಂತಪ್ಪ ಕಾಳಗಿ, ಮಹೇಶ ಅಬಕಾರಿ, ಗೀತಾ ನೇಮದಿ, ಸಂಗಪ್ಪ ಮ್ಯಾಗೇರಿ, ಶಿವಾನಂದ ಗೋತಗಿ ಹಾಗೂ ಸಿಬ್ಬಂದಿ ಇದ್ದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ವಿಶ್ವದಾದ್ಯಂತ ವನ್ಯಜೀವಿಗಳ ರಕ್ಷಣೆಗಾಗಿ ಎಷ್ಟೇ ಕಠಿಣ ಕಾನೂನುಗಳು ಬಂದರೂ ಸಹ ಪ್ರಾಣಿಗಳ ಅಕ್ರಮ ಬೇಟೆ ಮತ್ತು ಸಾಗಣೆ ನಿಲ್ಲುತ್ತಿಲ್ಲ. ಔಷಧಗಳ ತಯಾರಿಕೆ, ಅಲಂಕಾರಿಕ ವಸ್ತುಗಳು, ಮಾಂಸ ಮತ್ತು ಸಾಕುಪ್ರಾಣಿಗಳ ವ್ಯಾಪಾರಕ್ಕಾಗಿ ಕೆಲವು ವಿಶಿಷ್ಟ ಜೀವಿಗಳನ್ನು ಜಗತ್ತಿನಾದ್ಯಂತ ಭಾರಿ ಪ್ರಮಾಣದಲ್ಲಿ ಸಾಗಿಸಲಾಗುತ್ತಿದೆ. ಪ್ಯಾಂಗೋಲಿನ್, ಖಡ್ಗಮೃಗ, ಆನೆ, ಹುಲಿ ಮತ್ತು ಚಿರತೆ, ಆಮೆ ಮತ್ತು ಕಡಲಾಮೆ, ಮೆಕಾವ್ ಗಿಳಿಗಳು, ಶಾರ್ಕ್ ಮೀನು, ಹಾವುಗಳು ಮತ್ತು ಗೆಕ್ಕೋ ಹಲ್ಲಿಗಳು, ಏಷ್ಯಾದ ಕಪ್ಪು ಕರಡಿ ಇದರಿಂದಾಗಿ ಹಲವು ಪ್ರಾಣಿ ಪ್ರಭೇದಗಳು ಇಂದು ಸಂಪೂರ್ಣ ಅಳಿವಿನ ಅಂಚಿಗೆ ಬಂದು ತಲುಪಿವೆ.
- ಕರ್ನಾಟಕದ ಗದಗ ಜಿಲ್ಲೆಯ ಹೊಂಬಳ ಗ್ರಾಮದ ರಂಗನಾಥ ಕುಲಕರ್ಣಿ ಮತ್ತು ಗೀತಾ ದಂಪತಿಯ ಹಿರಿಯ ಪುತ್ರಿ ಸ್ಫೂರ್ತಿ ಕುಲಕರ್ಣಿ, ಭಾರತೀಯ ಸೇನೆಯ ಬಿಆರ್‌ಒ ಅಡಿಯ 'ಪ್ರಾಜೆಕ್ಟ್ ಚೇತಕ್'ನ 45 ಟಾಸ್ಕ್ ಫೋರ್ಸ್‌ನ ಪ್ರಥಮ ಮಹಿಳಾ ಕಮಾಂಡರ್ ಆಗಿ ನೇಮಕಗೊಳ್ಳುವ ಮೂಲಕ ಇಡೀ ದೇಶವೇ ಕರ್ನಾಟಕದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ. ಅವರ ಕಿರಿಯ ಸಹೋದರಿ ಸಂಪ್ರಿತಾ ಕುಲಕರ್ಣಿ ಕೂಡ ಭಾರತೀಯ ಸೇನೆಯಲ್ಲಿ ಮೇಜರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
- ಭಾರತೀಯ ಮೂಲದ ನಾಸಾ (NASA) ಗಗನಯಾತ್ರಿ, ತುರ್ತು ವೈದ್ಯಕೀಯ ತಜ್ಞ ಹಾಗೂ ಅಮೆರಿಕದ ಸ್ಪೇಸ್ ಫೋರ್ಸ್ ಕರ್ನಲ್ ಅನಿಲ್ ಮೆನನ್ ಅವರು ಕಜಕಿಸ್ತಾನದ ಬೈಕೊನೂರ್ ಕಾಸ್ಮೋಡ್ರೋಮ್ನಿಂದ ರಷ್ಯಾದ ರೋಸ್ಕೋಸ್ಮೋಸ್ ಸೊಯುಜ್ MS-29 ಬಾಹ್ಯಾಕಾಶ ನೌಕೆಯಲ್ಲಿ ಉಡಾವಣೆಯಾಗಲಿದ್ದಾರೆ. ಅವರೊಂದಿಗೆ ರಷ್ಯಾದ ಗಗನಯಾತ್ರಿಗಳಾದ ಪಿಯೋಟರ್ ಡುಬ್ರೊವ್ ಮತ್ತು ಅನ್ನಾ ಕಿಕಿನಾ ಸಹ ಈ ಮಿಷನ್‌ನಲ್ಲಿ ಭಾಗಿಯಾಗಲಿದ್ದಾರೆ.
- ಹ್ಯೂಸ್ಟನ್‌ನಲ್ಲಿ ಬಾಲ್ಯದಲ್ಲೇ ರಾಕೆಟ್ ಉಡಾವಣೆಗಳನ್ನು ನೋಡಿ ಪ್ರೇರಿತನಾದ ಭಾರತೀಯ ಮೂಲದ ಅಮೆರಿಕನ್ ವಿಜ್ಞಾನಿ ಅಮಿತ್ ಕ್ಷತ್ರಿಯಾ, ಈಗ ನಾಸಾದಲ್ಲಿ ಪ್ರಮುಖ ಹುದ್ದೆಯನ್ನು ನಿರ್ವಹಿಸುತ್ತ, ಚಂದ್ರನ ಮೇಲೆ ಅಂತರಿಕ್ಷ ಯಾತ್ರಿಗಳನ್ನು ಇಳಿಸುವ ಮಹತ್ವಾಕಾಂಕ್ಷಿ ಯೋಜನೆಗೆ ಮುನ್ನಡೆ ನೀಡುತ್ತಿದ್ದಾರೆ. ನಾಸಾದ ಅಸೋಸಿಯೇಟ್ ಆಡಳಿತಾಧಿಕಾರಿಯಾಗಿ, ವಿಸ್ಕಾನ್ಸಿನ್‌ನಲ್ಲಿ ಜನಿಸಿದ ಅಮಿತ್ ಕ್ಷತ್ರಿಯಾ ಸಂಸ್ಥೆಯಲ್ಲಿನ ಅತಿ ಹಿರಿಯ ನಾಗರಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಓದುಗರ ಅನಿಸಿಕೆ...




**ಸಾಧ್ಯತೆ ತಳ್ಳಿ ಹಾಕುವಂತಿಲ್ಲ :** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸಂಪುಟಕ್ಕೆ ಸಹಕಾರ ಖಾತೆಯ ನೂತನ ಸಚಿವರಾಗಿ ಹಿರಿಯ ಸಹಕಾರಿ ಮುಖಂಡರೂ, ಮಾಜಿ ಉಪಮುಖ್ಯಮಂತ್ರಿಗಳೂ ಆದ ಲಕ್ಷ್ಮಣ ಸಂಗಪ್ಪ ಸವದಿ ಅವರು ನೇಮಕಗೊಂಡಿರುವುದು ನಮಗೆಲ್ಲ ತುಂಬ ಸಂತಸ ತಂದಿದೆ. ಲಕ್ಷ್ಮಣ ಸಂಗಪ್ಪ ಸವದಿ ಅವರಿಗೆ ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಅಭಿನಂದನೆಗಳು, ಶುಭ ಹಾರೈಕೆಗಳು.

**▸▸ ರಾಯಪ್ಪ ಬಿರಾದಾರ, ಹುಕ್ಕೇರಿ**

**ಸಕಾಲಿಕವಾಗಿದೆ :** ಗ್ರಾಹಕರ ಸಣ್ಣ ಸಾಲಗಳ ಮೇಲೆ ಮೈಕ್ರೋಫೈನಾನ್ಸ್ ಹಾಗೂ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಹೆಚ್ಚಿನ ಬಡ್ಡಿ ಮತ್ತು ಗುಪ್ತ ಶುಲ್ಕಗಳನ್ನು ವಿಧಿಸುವುದಕ್ಕೆ ಬ್ರೇಕ್ ಹಾಕಲು ಆರ್‌ಬಿಐ ಹೊಸ ಕರಡು ನಿಯಮಾವಳಿಗಳನ್ನು ಪ್ರಸ್ತಾಪಿಸಿರುವುದು ಸಕಾಲಿಕವಾಗಿದೆ. ಇದು ಆದಷ್ಟು ಬೇಗ ಜಾರಿಯಾದಲ್ಲಿ, ಅನೇಕ ಬಡ ಗ್ರಾಹಕರ ಹಣ ಹಾಗೂ ಜೀವ ಉಳಿಯುವುದು.

**▸▸ ಅನಿಲ್ ಕುಮಾರ್ ಎನ್.ಕೆ., ಮಂಡ್ಯ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.